ಅ.ದಾ. ಸಂಃ 391/2017 ಡಿ.ಡಬ್ಲ್ಯು: 01

ದಿನಾಂಕಃ 08-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಎನ್.ವಿ. ವಾದಿ ಪರ ವಕೀಲರಿಂದಃ

ಕೊಡಿಗಾನಹಳ್ಳಿಯ ಸರ್ವೆ ನಂ. 78 ರ 3 ಎಕರೆ 11 ಗುಂಟೆ ಜಮೀನು ನನ್ನ ಹೆಸರಿಗೆ ತಹಶೀಲ್ದಾರ್ ರವರ ಕಛೇರಿಯಿಂದ ಮಂಜೂರಾಗಿದೆ ಎಂದರೆ ಸರಿ. ಸಾಕ್ಷಿಗೆ ಒಂದು ಮಂಜೂರಾತಿ ಪತ್ರದ ದೃಢೀಕೃತ ನಕಲನ್ನು ತೋರಿಸಲಾಯಿತು ಆದರೆ ಸಾಕ್ಷಿಯು ತನಗೆ ಓದಲು ಬರುವುದಿಲ್ಲ ಎಂದು ಹೇಳಿದ ಕಾರಣ ಸದರಿ ದಾಖಲೆಯನ್ನು ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ. ನನ್ನ ತಂದೆಯವರು ದಿನಾಂಕ 20.04.1970 ರಂದು ಯಾವುದೇ ಜಮೀನನ್ನು ಮಾರಾಟ ಮಾಡಿರುವುದಿಲ್ಲ. ದ್ವಾರಗಾನಹಳ್ಳಿಯ ರೀ ಸರ್ವೆ ನಂ. 56 ರ ಜಮೀನು ಯಾರದ್ದು ಎಂಬುದು ನನಗೆ ಗೊತ್ತಿಲ್ಲ. ನನ್ನ ತಾಯಿಯಾದ ಅನಂತಮ್ಮರವರು ನನ್ನ ಸಲುವಾಗಿ ಯಾವುದಾದರೂ ಜಮೀನನ್ನು ಮಾರಾಟ ಮಾಡಿದರೋ ಇಲ್ಲವೋ ನನಗೆ ಗೊತ್ತಿಲ್ಲ. ಸರ್ವೆ ನಂ. 80/1 ರ 1 ಎಕರೆ 31 ಗುಂಟೆ ಜಮೀನು ಯಾರದ್ದು ಎಂಬುದು ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ತಾಯಿಯು ನನ್ನ ಅಭಿವೃದ್ಧಿ ಮತ್ತು ಬೆಳವಣಿಗೆಗಾಗಿ ಸರ್ವೆ ನಂ. 56 ರ ಜಮೀನು ಹಾಗೂ ಸರ್ವೆ ನಂ. 80/1 ರಲ್ಲಿ ಅರ್ಧ ಹಿಸ್ಸೆಯನ್ನು ಮಾರಾಟ ಮಾಡಿದರು ಎಂದರೆ ಗೊತ್ತಿಲ್ಲ. ವಾದಿಗೆ ದಾವಾ ಆಸ್ತಿಗಳಲ್ಲಿ ಭಾಗ ನೀಡಬಾರದೆಂಬ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು